ಪ್ರಾರಂಭವಾಗಿರುವ ಕಾರ್ಖಾನೆಯಾಗಲಿ, ಇನ್ನೂ ಪ್ರಾರಂಭವಾಗಿ ಅಥವಾ ಆಗದೇ ಮುಂಚ್ಚಿದ್ದರೂ ಸಹ ಅದು ಮಂತ್ರಿಗಳ ಗಮನಕ್ಕೆ ಬಾರದೇ ಇರುವುದಕ್ಕೆ ಏನು ಕಾರಣ ?

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಶ್ನೆಯನ್ನು ಪುನಃ ಅವರೇ ಒಂದು ಸಾರಿ ಓದಿದರೆ ಅರ್ಥವಾಗುತ್ತದೆ. ''ಕರ್ನಾಟಕದಲ್ಲಿರುವ ವ್ಯವಸಾಯಾಧಾರಿತ ಕೈಗಾರಿಕೆಗಳು, ಅದರಲ್ಲಿಯೂ ಸಕ್ಕರೆ ಕಾರ್ಖಾನೆಗಳು ಸರಿಯಾಗಿ ರೈತರ ಹಿತದೃಷ್ಟಿಯಲ್ಲಿ ಕೆಲಸಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ'' ಎಂದು ಕೇಳಿದ್ದಾರೆ, ಆ ರೀತಿ ದೂರು ಬಂದಿಲ್ಲ ಎಂದು ಹೇಳಿದ್ದೇನೆ. ಆದರೆ ಸಕ್ಕರೆ ಕಾರ್ಖಾನೆಗಳು ಸಹಕಾರಿ ವಲಯದಲ್ಲಿ, ಖಾಸಗಿ ವಲಯದಲ್ಲಿ ಮಂತ್ರಿ ಜಾಯಿಂಟ್ ವಲಯದಲ್ಲಿ ೨೭ ಕಾರ್ಖಾನೆಗಳ ಪೈಕಿ ೮ ಅಥವಾ ೯ ಅನ್ನು ಬಿಟ್ಟರೂ ಉಳಿದವು ಹಲವಾರು ರೀತಿಯಿಂದ ರೋಗಗ್ರಸ್ತವಾಗಿವೆ. ಕೆಲವು ಕಡೆ ಮಿಸ್ ಮ್ಯಾನೇಜ್‌ಮೆಂಟ್ ಇರಬಹುದು. ಕೇನ್ ಸಪ್ಲೈ ಇಲ್ಲದೇ ಇರಬಹುದು, ಲೆವಿ ಸಿಸ್ಟಂನಲ್ಲಿರತಕ್ಕ ಲೆವಿ ರೇಟ್ ಸಫಿಷಿಯಂಟ್ ಇಲ್ಲದೇ ಇರಬಹುದು. ಕೆಲವು ಪ್ರಾರಂಭದಲ್ಲೇ ತೊಂದರೆಗೆ ಒಳಗಾಗಿರಬಹುದು. ತಮಗೆ ಗೊತ್ತಿರುವ ಹಾಗೆ ಹಾವೇರಿ ಫ್ಯಾಕ್ಟರಿ ಇದೆ. ಅದು ಹುಟ್ಟುವಾಗಲೇ ರೋಗದಿಂದ ಹುಟ್ಟಿದೆ. ಬ್ರಹ್ಮನವರ ಕಾರ್ಖಾನೆಗೆ ಕೇನೇ ಇಲ್ಲ. ಇವಕ್ಕೆ ಯಾರು ಲೈಸನ್ಸ್ ಕೊಟ್ಟರು ಯಾರು ಪ್ರಾರಂಭ ಮಾಡಿದರು ? ಒಂದು ಸಕ್ಕರೆ ಕಾರ್ಖಾನೆಗೆ ಲೈಸನ್ಸ್ ಕೊಡುವಾಗ ಅದಕ್ಕೆ ಪೊಟೆನ್‌ಷಿಯಲ್ ಇದೆಯೇ, ಕೇನ್ ಬರುತ್ತದೆಯೇ ಇಲ್ಲವೇ—ಇದೆಲ್ಲಾ ಆಲೋಚನೆ ಇಲ್ಲದೆ ಹಿಂದೆ ಆಗಿವೆ. ಈ ರೀತಿ ಹಲವಾರು ಇವೆ. ನನ್ನ ಅದಕ್ಷತೆಯನ್ನು ಪುಂಚ್ಚಿ ಕೊಳ್ಳುವುದಕ್ಕೆ ಅಲ್ಲ. ಮಾನ್ಯ ಸದಸ್ಯರಿಗೆ ಸಕ್ಕರೆ ಕಾರ್ಖಾನೆಗಳ ಸ್ಥಿತಿ ಚೆನ್ನಾಗಿಲ್ಲ ಎಂದು ಗೊತ್ತಿದೆ. ಆದರೆ ಅವರು ಕೇಳಿರುವ ಪ್ರಶ್ನೆಗೆ ಏನು ಉತ್ತರ ಕೊಡಬೇಕೋ ಅದನ್ನೂ ಕೊಟ್ಟಿದ್ದೇನೆ.

ಶ್ರೀ ಎಂ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವಪೂರ್ಣ ಪ್ರಶ್ನೆ. ಮಾನ್ಯ ಮಂತ್ರಿಗಳು ಕೆಲವು ಕಾರ್ಖಾನೆಗಳು ಫಾಯಿದೆಯಲ್ಲಿವೆ, ಉಳಿದೆಲ್ಲಾ ಲುಕ್ಸಾನಿನಲ್ಲಿವೆ ಎಂದು ಹೇಳಿದರು. ಹಾಗಾದರೆ ಎಷ್ಟು ಕಾರ್ಖಾನೆಗಳು ಲುಕ್ಸಾನಿನಲ್ಲಿವೆ? ಅವುಗಳ ಹೆಸರೇನು? ಈ ಎಲ್ಲಾ ಕಾರ್ಖಾನೆಗಳ ಲೆಕ್ಕಪತ್ರಗಳನ್ನು ತಪಾಸಣೆಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಏಕೆ ಒಪ್ಪಿಸಬಾರದು ? ಅಲ್ಲಿ ಅವ್ಯವಹಾರ ನಡೆದಿಲ್ಲವೇ? ನಡೆದಿದ್ದರೆ ಯಾವ ರೀತಿ ನಡೆದಿದೆ ಎನ್ನುವುದು ಒಂದು. ಈ ಸಕ್ಕರೆ ಕಾರ್ಖಾನೆಗಳಲ್ಲಿ ಮುಖ್ಯವಾಗಿ ಮ್ಯಾನೇಜ್‌ಮೆಂಟ್ ಬಂದ ಕೂಡಲೇ ಯಾರಿಗೆ ಏನೇನು ಬೇಕೋ ಅದನ್ನು ಪರ್ಚೇಸ್ ಮಾಡಿ ಸ್ಟೋರ್‌ನಲ್ಲಿಡುವುದು. ಯಾವ ಯಾವ ಕಾರ್ಖಾನೆಯಲ್ಲಿ ಎಷ್ಟೆಷ್ಟು ಇನ್‌ವೆಸ್ಟ್‌ಮೆಂಟ್ ಮಾಡಿದೆ? ಗನಿ ಬ್ಯಾಗ್ ವ್ಯವಹಾರದಲ್ಲಿ ನ್ಯಾಷನಲ್ ಲೆವೆಲ್ ಮತ್ತು ಸ್ಟೇಟ್ ಲೆವೆಲ್‌ನಲ್ಲಿ ಯಾವ ಯಾವ ಕಾರ್ಖಾನೆಯಲ್ಲಿ ಎಷ್ಟೆಷ್ಟು ಪರ್ಚೇಸ್ ಮಾಡಿದಾರೆ ಎನ್ನುವ ವಿಷಯಗಳನ್ನು ಪಡೆದುಕೊಂಡು ಅದನ್ನು ಸದನದ ಮುಂದೆ ಮಂಡಿಸುತ್ತೀರಾ?

ಶ್ರೀ ಜೆ. ಹೆಚ್. ಪಟೇಲ್.—ಆಗಬಹುದು ಸ್ವಾಮಿ.

ಶ್ರೀ ಎಂ. ಎಸ್. ಪಾಟೀಲ್.—ಆಗಬಹುದೆಂದು ಹೇಳಿದರೆ, ಏನು ನನಗೆ ಅರ್ಥವಾಗಲಿಲ್ಲ. ರಾಜ್ಯದವರ ಇನ್‌ವೆಸ್ಟ್‌ಮೆಂಟ್ ಎಷ್ಟು ಇದೆ. ಇದರಿಂದಾಗಿ ರೈತರು ಹಣಕಾಸಿನ ವಿಷಯದಲ್ಲಿ ಉನ್ನತ ಮಟ್ಟಕ್ಕೆ ಹೋಗತಕ್ಕಂತಹ...

ಶ್ರೀ ಜೆ.ಹೆಚ್. ಪಟೇಲ್.—ಬೇರೆ ಪ್ರಶ್ನೆ ಕೇಳಲಿ ಅದಕ್ಕೆ ಉತ್ತರ ಕೊಡುತ್ತೇನೆ. ಆ ವಿವರಗಳು ಈ ಪ್ರಶ್ನೆಯಿಂದ ಉದ್ಭವಿಸುವುದಿಲ್ಲ.

ಕರಾವಳಿಯ ಮೀನುಗಾರರಿಗೆ ವಸತಿ ಗೃಹಗಳ ರಚನೆ

೨೨೪. ಶ್ರೀ ಜಿ. ಎಸ್. ಆಚಾರ್. (ಬೈಂದೂರು)—ಮಾನ್ಯ ಕೇಷ್ಮೆ ಪಶುಸಂಗೋಪನೆ ಹಾಗೂ ಮೀನುಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಕರಾವಳಿಯ ಮೀನುಗಾರರಿಗೆ ವಸತಿ ಯೋಜನೆಯೊಂದನ್ನು ರೂಪಿಸಲು ಸರ್ಕಾರ ದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಆ) ಕರಾವಳಿಯಲ್ಲಿ ಸರ್ಕಾರಿ ಜಾಗ ಖಾಲಿ ಇಲ್ಲದೆ ಇರುವುದರಿಂದ ಹಾಗೂ ಮೀನುಗಾರರು ಕರಾವಳಿ ಬಿಟ್ಟು ಹೊರಗೆ ಹೋಗಲು ಒಪ್ಪದೆ ಇರುವುದರಿಂದ ಮೀನುಗಾರರ ಸ್ವಂತ ಜಾಗದಲ್ಲಿ ಮನೆ ಕಟ್ಟಿಸುವ ಸಲುವಾಗಿ ಈ ಯೋಜನೆ ರೂಪಿಸಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆಯೇ ?